# ‘ಸೂಪರ್‌ಸ್ಟಾರ್’ ಪಟ್ಟಕ್ಕೆ ಸಂಚಕಾರ?



ತಮಿಳಿನಲ್ಲಿ ರಜನಿಕಾಂತ್ ಅವರ ‘ಸೂಪರ್‌ಸ್ಟಾರ್ ಯುಗ’ ಮುಗಿಯಿತೆ.. ಎನ್ನುವುದೀಗ ಎಲ್ಲೆಡೆ ಚರ್ಚೆಯ ವಿಷಯ. ಇತ್ತೀಚೆಗೆ ಚೆನ್ನೈನ ಒಂದು ತಮಿಳು ಮ್ಯಾಗಸಿನ್ ನಡೆಸಿದ ಸಮಾರಂಭದಲ್ಲಿ ‘ಮುಂದಿನ ಸೂಪರ್‌ಸ್ಟಾರ್’ ಎಂದು ನಟ ವಿಜಯ್ ಅವರನ್ನು ಘೋಷಿಸಿದ್ದು ಈ ಚರ್ಚೆಯ ಕಾವು ಹೆಚ್ಚಿಸಿದೆ. ‘ತಮಿಳು ಸಿನಿಮಾಗಳಿಗೆ ಒಬ್ಬನೇ ಸೂಪರ್‌ಸ್ಟಾರ್. ಆ ಪಟ್ಟವನ್ನು ಯಾರೂ ಕಿತ್ತುಕೊಳ್ಳಲು ಸಾಧ್ಯವಿಲ್ಲ’ ಎಂದು ರಜನಿ ಅಭಿಮಾನಿಗಳು ಸಿಂಹನಾದ ಶುರು ಮಾಡಿದ್ದಾರೆ. ರಜನಿ ಅಭಿನಯಿಸುತ್ತಿರುವ ಹೊಸ ಚಿತ್ರ ‘ಲಿಂಗಾ’ದ ಪ್ರಚಾರದ ಅಬ್ಬರವೂ ಒಮ್ಮೊಂದೊಮ್ಮೆಗೆ ಜೋರಾಗಿದೆ. ‘ಲಿಂಗಾ’ ಚಿತ್ರ ಬಿಡುಗಡೆಯಾಗುವುದಕ್ಕೆ ಮುನ್ನವೇ ಅದರ ಥಿಯೇಟರ್ ಹಕ್ಕುಗಳನ್ನು ನೂರು ಕೋಟಿ ರೂಪಾಯಿಗೂ ಹೆಚ್ಚಿನ ಮೊತ್ತಕ್ಕೆ ಎರೋಸ್ ಇಂಟರ್‌ನ್ಯಾಷನಲ್ ಸಂಸ್ಥೆ ಖರೀದಿಸಿದೆ ಎಂಬ ಸುದ್ದಿಯೂ ಹಬ್ಬಿದೆ. ಆ ಮೂಲಕ ತಮಿಳಿನಲ್ಲಿ ರಜನಿ ಇವತ್ತಿಗೂ ಸೂಪರ್‌ಸ್ಟಾರ್ ಎನ್ನುವುದನ್ನು ಒತ್ತಿ ಹೇಳಲಾಗುತ್ತಿದೆ. ಈ ಮಧ್ಯೆ ಕೇಂದ್ರ ಸರ್ಕಾರವು ರಜನಿಕಾಂತ್ ಅವರಿಗೆ ‘ವರ್ಷದ ಭಾರತೀಯ ಸಿನಿಮಾ ವ್ಯಕ್ತಿ’ ಎಂಬ ‘ಶತಮಾನದ ಪ್ರಶಸ್ತಿ’ಯನ್ನು ಘೋಷಿಸಿದೆ. ಈ ಪ್ರಶಸ್ತಿಯನ್ನು ಗೋವಾದಲ್ಲಿ ನ.20ರಿಂದ ಆರಂಭವಾಗಲಿರುವ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಅಮಿತಾಭ್ ಬಚ್ಚನ್ ಸಮ್ಮುಖದಲ್ಲಿ ಪ್ರದಾನ ಮಾಡುವುದಾಗಿಯೂ ಸರ್ಕಾರ ಪ್ರಕಟಿಸಿದೆ.

ತನ್ನದೇ ಆದ ಸ್ಟೈಲ್ ಮತ್ತು ಮ್ಯಾನರಿಸಂಗಳಿಂದ ರಜನಿಕಾಂತ್, ಭಾರತೀಯ ಚಿತ್ರರಂಗದ ಈ ಮಾದರಿಯ ಏಕೈಕ ಸ್ಟಾರ್ ಎನ್ನುವುದಂತೂ ನಿಜ. ಬೆಂಗಳೂರಿನಲ್ಲಿ ಬಸ್ ಕಂಡಕ್ಟರ್ ಆಗಿದ್ದ ವ್ಯಕ್ತಿ ಹೀಗೆ ಸಿನಿಮಾ ಜಗತ್ತಿನ ಅತ್ಯುನ್ನತ ಎತ್ತರಕ್ಕೆ ಏರಿರುವುದು ಅದ್ಭುತ ಸಾಧನೆಯೇ. ಅದರಲ್ಲೂ ಅಮೆರಿಕ ಸಹಿತ ದೇಶವಿದೇಶಗಳ ಸಿನಿಮಾಗಳಲ್ಲಿ ನಟಿಸಿರುವುದು, ಅಲ್ಲೆಲ್ಲ ಅಭಿಮಾನಿಗಳನ್ನು ಹೊಂದಿರುವುದು ವಿಶೇಷವೇ.

ಆದರೆ 63ರ ಹರೆಯದ (ಬರ್ತ್‌ಡೇ 12–12–1950) ರಜನಿ ಅವರ ಹಿಂದಿನ ತಾರಾಪಟ್ಟ ಈಗ ಹಾಗೆಯೇ ಉಳಿದಿದೆಯೆ.. ಎನ್ನುವುದರ ಬಗ್ಗೆ ದಟ್ಟ ಅನುಮಾನಗಳು ಶುರು ಆಗಿರುವುದಂತೂ ನಿಜ. ಇಲ್ಲವಾಗಿದ್ದಲ್ಲಿ, ಇತ್ತೀಚೆಗೆ ಬಿಡುಗಡೆಯಾದ ಅವರ ಕೋಚಡೈಯನ್ ಎನ್ನುವ ಸಿನಿಮಾ ಬಾಕ್ಸಾಫೀಸ್‌ನಲ್ಲಿ ಅಷ್ಟೊಂದು ದಯನೀಯವಾಗಿ ನೆಲ ಕಚ್ಚುತ್ತಿತ್ತೆ? ಹಾಗೆಂದು ಈ ವಿಷಯದಲ್ಲಿ ಇದಮಿತ್ಥಂ ಎನ್ನುವ ತೀರ್ಮಾನ ಕೊಡುವಂತಿಲ್ಲ. ಏಕೆಂದರೆ ರಜನಿ ಸೂಪರ್‌ಸ್ಟಾರ್ ಅಲ್ಲವೆಂದಾದಲ್ಲಿ ಹೊಸ ಸಿನಿಮಾ ಬಿಡುಗಡೆಗೆ ಮುನ್ನವೇ 100 ಕೋಟಿಯ ವ್ಯಾಪಾರ ಮಾಡುತ್ತಿತ್ತೆ.. ಎನ್ನುವ ಪ್ರಶ್ನೆ ಬರುತ್ತದೆ. ಅದಕ್ಕೆ ವಿರುದ್ಧವಾಗಿ, ರಜನಿಕಾಂತ್ ಮಗಳೂ ಎರೋಸ್ ಸಂಸ್ಥೆಯ ಆಡಳಿತ ಮಂಡಳಿಯಲ್ಲಿ ಇರುವುದರಿಂದ ಈ ವ್ಯಾಪಾರ ನಡೆದಿದೆ ಎನ್ನುವ ವಾದಗಳೂ ಕೇಳಿಬರುತ್ತಿವೆ.

ತಮಿಳುನಾಡಿನಲ್ಲಿ ‘ರಜನಿ ಜ್ವರ’ ಇನ್ನೂ ಜೀವಂತವಾಗಿದೆ ಎನ್ನುವುದರ ಬಗ್ಗೆ ಎರಡು ಮಾತಿಲ್ಲ. ಸಿನಿಮಾವನ್ನು ಹಗಲೂ ರಾತ್ರಿ ಉಸಿರಾಡುವ ತಮಿಳರಲ್ಲಿ ಇಂತಹ ಅಭಿಮಾನ ಸಹಜವೇ. ಕಮಲಹಾಸನ್, ವಿಜಯ್ ಮತ್ತು ವಿಕ್ರಮ್ ಕೂಡಾ ಇದೇ ಮಾದರಿಯ ಅಭಿಮಾನಿಗಳ ದೊಡ್ಡ ಗುಂಪನ್ನು ಹೊಂದಿದ್ದಾರೆ. ಆದರೆ ಇವರಲ್ಲಿ ಯಾರಾದರೂ ರಜನಿಯ ಸೂಪರ್‌ಸ್ಟಾರ್ ಪಟ್ಟವನ್ನು ಕಿತ್ತುಕೊಳ್ಳಲು ಸಾಧ್ಯವೆ? ಕೆ.ಬಾಲಚಂದರ್ ಅವರ ರಾಷ್ಟ್ರಪ್ರಶಸ್ತಿ ವಿಜೇತ ‘ಅಪೂರ್ವ ರಾಗಂಗಳ್’ ಚಿತ್ರದ ಮೂಲಕ ಸಿನಿಮಾ ರಂಗಕ್ಕೆ ಕಾಲಿಡುವ ಮುನ್ನ ರಜನಿ ಮದ್ರಾಸ್ ಫಿಲಂ ಇನ್‌ಸ್ಟಿಟ್ಯೂಟ್ ನಲ್ಲಿ ಅಭಿನಯ ತರಬೇತಿ ಪಡೆದಿದ್ದರು. ಆದರೆ ಅಭಿನಯದಲ್ಲಿ ಅವರು ಕಲಿತದ್ದಕ್ಕಿಂತ, ಸ್ಟೈಲ್‌ನಲ್ಲಿ ಅವರು ಕಲಿಸಿದ್ದೇ ಹೆಚ್ಚು! ಪ್ರತಿಯೊಂದು ಚಿತ್ರದ ಮೂಲಕ ಬಾಕ್ಸಾಫೀಸ್ ದಾಖಲೆಗಳನ್ನು ಮಾಡುತ್ತಲೇ ಬಂದ ಅವರು ‘ಶಿವಾಜಿ’ ಚಿತ್ರಕ್ಕೆ 26 ಕೋಟಿ ರೂಪಾಯಿ ಸಂಭಾವನೆ ಪಡೆದಾಗ, ಏಷ್ಯಾದಲ್ಲಿ ಜಾಕಿ ಚಾನ್ ಬಳಿಕ ಅತ್ಯಧಿಕ ಸಂಭಾವನೆ ಪಡೆದ ನಟ ಎಂಬ ದಾಖಲೆಯನ್ನೂ ಬರೆದರು.

ಕೆಲಸದ ಮೇಲಿನ ಅವರ ಶ್ರದ್ಧೆಯ ಬಗ್ಗೆ ಎರಡು ಮಾತಿಲ್ಲ. ‘ಲಿಂಗಾ’ ಚಿತ್ರದ ಡಬ್ಬಿಂಗನ್ನು ಒಂದೇ ದಿನದಲ್ಲಿ ಮುಗಿಸಿದ್ದಾರೆ ಎನ್ನುವುದು ಹೊಸ ದಾಖಲೆಯ ಸುದ್ದಿ. ಈ ಮಧ್ಯೆ – ಲಿಂಗಾ ತಮ್ಮ ‘ಮುಳ್ಳೈ ವಾನಂ 999’ ಎಂಬ ಚಿತ್ರದ ನಕಲು; ಅದರ ಬಿಡುಗಡೆಗೆ ತಡೆ ನೀಡಿ – ಎಂದು ರವಿ ರತ್ನ ಎಂಬವರು ಕೋರ್ಟ್ ಮೊರೆ ಹೋಗಿದ್ದಾರೆ. ವಿವಾದಗಳು ಚಿತ್ರದ ಯಶಸ್ಸಿಗೆ ಇನ್ನಷ್ಟು ನೆರವಾಗುತ್ತವೆ ಎನ್ನುವುದಂತೂ ನಿಜ. ಒಟ್ಟಾರೆ ರಜನಿಕಾಂತ್ ಬಿಟ್ಟು ತಮಿಳು ಚಿತ್ರರಂಗದ ಬಗ್ಗೆ ಮಾತನಾಡುವಂತೆಯೇ ಇಲ್ಲ. ಆದರೆ, ಏರುತ್ತಿರುವ ವಯಸ್ಸು, ಕೈಕೊಡುತ್ತಿರುವ ಆರೋಗ್ಯ, ಹೊಸ ಸ್ಟಾರ್‌ಗಳ ಹೆಚ್ಚುತ್ತಿರುವ ಜನಪ್ರಿಯತೆ ರಜನಿಯ ಸೂಪರ್‌ಸ್ಟಾರ್ ಪಟ್ಟವನ್ನು ಅಲುಗಾಡಿಸುತ್ತಿರುವುದಂತೂ ನಿಜ.

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru- 560074. Editor: K.N. TILAK KUMAR.
Editorial Office: 75, M.G Road, Bengaluru- 560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65